**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾಧಿಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಎಂ ವಿ ಸಿ ನಂ. 267/ 2021**

| | |
|---|---|
| ಸಾಕ್ಷಿಯ ಹೆಸರು | : ಗೋಪಿ |
| ತಂದೆಯ ಹೆಸರು | : ರಮೇಶ್ |
| ವಯಸ್ಸು | : 37 ವರ್ಷ |
| ಉದ್ಯೋಗ | : ಸರ್ವಿಸ್ ಮ್ಯಾನೇಜರ್ ಅಶೋಕ್ ಲೇಲ್ಯಾಂಡ್ ಪಿಡಬ್ಲ್ಯೂ -2 ಕಾವೇರಿ ಮೋಟಾರ್ಸ್ |
| ವಾಸ ಸ್ಥಳ | : ಮೈಸೂರು |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 16.01.2024**

**ಮುಖ್ಯ ವಿಚಾರಣೆ - ಅರ್ಜಿದಾರರ ಪರ ವಕೀಲರಿಂದ**

ದಿನಾಂಕಃ 28.09.2019 ರಂದು ನಮ್ಮ ಸಂಸ್ಥೆಗೆ ಗೂಡ್ಸ್ ವಾಹನ ಸಂಃ ಕೆಎ 21 ಬಿ 2194 ವಾಹನ ಅಪಘಾತದಿಂದ ಜಖಂ ಗೊಂಡು ರಿಪೇರಿಗೆ ಬಂದಿರುತ್ತದೆ. ಅಪಘಾತಿತಗೊಂಡ ವಾಹನಕ್ಕೆ ನಾವು ಸಂಪೂರ್ಣ ರಿಪೇರಿ ಮಾಡಿ ಆ ಬಗ್ಗೆ ಬಿಲ್ಲುಗಳನ್ನು ಅರ್ಜಿದಾರರಿಗೆ ನೀಡಿರುತ್ತೇವೆ. ಸದರಿ ಬಿಲ್ಲುಗಳನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿರುತ್ತದೆ. ಸದರಿ ವಾಹನದ ಮಾಲೀಕರು ಈ ಕೇಸಿನ ಅರ್ಜಿದಾರರಾಗಿರುತ್ತಾರೆ. ರಿಪೇರಿ ಬಾಬ್ತು ಹಣವನ್ನು ಅರ್ಜಿದಾರರೇ ಪಾವತಿ ಮಾಡಿರುತ್ತಾರೆ. ನಮ್ಮ ಬಿಲ್ಲಿನಲ್ಲಿ ವಾಹನ ಯಾರ ಹೆಸರಿನಲ್ಲಿ ನೋಂದಣಿಯಾಗಿರುತ್ತದೆಯೋ ಅವರ ಹೆಸರಾದ ರಾಜ್ ಪೂಜಾರಿಯವರ ಹೆಸರಿನಲ್ಲಿ ಬಂದಿರುತ್ತದೆ.

**ಪಾಟೀ ಸವಾಲು - ಎದುರುದಾರರ ಪರ ವಕೀಲರಿಂದ**

ನಾನು 15 ವರ್ಷದಿಂದ ಸರ್ವಿಸ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಗೂಡ್ಸ್ ವಾಹನ ಸಂಃ ಕೆಎ 21 ಬಿ 2194 ರ ಅಪಘಾತದ ರಿಪೇರಿ ಬಾಬ್ತು ಒಂದೇ ಬಾರಿ ಬಂದಿರುತ್ತದೆ. ರಿಪೇರಿಗೆ ಬಂದಾಗ ಜಾಬ್ ಕಾರ್ಡು ಒಂದೇ ಬಾರಿ ಹಾಕುತ್ತೇವೆ. ಮುಂದುವರೆದ ರಿಪೇರಿ ಮಾಡುವಾಗ ಸಪ್ಲಿಮೆಂಟರಿ ಜಾಬ್ ಕಾರ್ಡಿನಲ್ಲಿ ನಮೂದಾಗುತ್ತದೆ. ಸದರಿ ಜಾಬ್ ಕಾರ್ಡು ಬೇರೆ ಇರುತ್ತದೆ. ಜಾಬ್ ಕಾರ್ಡು ಇನ್ ವಾಯ್ಸ್ ಬೇರೆ ಕ್ಯಾಷ್ ರಿಸಿಪ್ಟ್ ಬೇರೆ ಇರುತ್ತದೆ ಎಂದರೆ ಸರಿ. ಜಾಬ್ ಕಾರ್ಡು ಇನ್ ವಾಯ್ಸ್ ನಲ್ಲಿ ವಾಹನದ ರಿಪೇರಿ ಬಾಬ್ತು ಎಸ್ಟಿಮೇಷನ್ ಇರುತ್ತದೆ ಎಂದರೆ ಸರಿ. ಅರ್ಜಿದಾರರು ಪೇಮೆಂಟ್ ಮಾಡಿದ ಬಗ್ಗೆ ನಾನು ಕ್ಯಾಷ್ ರಿಸಿಪ್ಟ್ ಹಾಜರು ಪಡಿಸಿಲ್ಲ. ವಾಹನ ರಿಪೇರಿ ಮಾಡಿದ ನಂತರ ಡೆಲಿವರಿ ಕೊಟ್ಟ ಬಗ್ಗೆ ಡೆಲಿವರಿ ನೋಟನ್ನು ಹಾಜರು ಪಡಿಸಿಲ್ಲ. ನಾನು ಹಾಜರು ಪಡಿಸಿದ ಎರಡು ಜಾಬ್ ಕಾರ್ಡು ಬೇರೆ ಬೇರೆ ದಿನಾಂಕ ಇರುತ್ತದೆ ಎಂದರೆ ಸರಿ. ಜಾಬ್ ಕಾರ್ಡು ಇನ್ ವಾಯ್ಸ್ ನಲ್ಲಿ ಪೇಮೆಂಟ್ ಮಾಡಿದ ಬಗ್ಗೆ ಇರುವುದಿಲ್ಲ ಎಂದರೆ ಸರಿ. ದಿನಾಂಕಃ 05.03.2021 ಜಾಬ್ ಕಾರ್ಡು ವಾಹನ ರಿಪೇರಿಗೆ ಬಂದ ದಿನಾಂಕವಾಗಿರುತ್ತದೆ. ನಿಪಿ-6 ರಲ್ಲಿ ಮೊದಲನೇ ಇನ್ ವಾಯ್ಸ್ ದಿನಾಂಕಃ 10.10.2019 ಎಂದರೆ ಸರಿ. ವಾಹನ ರಿಪೇರಿಗೆ ಬಂದ ನಾಲ್ಕು ತಿಂಗಳ ಬಳಿಕ ಇನ್ ವಾಯ್ಸ್ ಕೊಟ್ಟಿದ್ದೇವೆ ಎಂದರೆ ಸರಿ. ವಾಹನ ರಿಪೇರಿಗೆ ಬಂದ ತಕ್ಷಣ ಅದಕ್ಕೆ ಜಖಂ ಆದ ಬಗ್ಗೆ ಎಸ್ಟಿಮೇಷನ್ ಅನ್ನು ಸಂಜೆ ಒಳಗೆ ಕೊಡುವ ವ್ಯವಸ್ಥೆ ಇದೆ ಎಂದರೆ ಸಣ್ಣಪುಟ್ಟ ಜಖಂ ಆದರೆ ಕೊಡುವ ವ್ಯವಸ್ಥೆ ಇದೆ ದೊಡ್ಡ ಮಟ್ಟದಲ್ಲಿ ಜಖಂ ಆದರೆ ಅದೇ ದಿನ ಕೊಡುವ ವ್ಯವಸ್ಥೆ ಇರುವುದಿಲ್ಲ. ಜಾಬ್ ಕಾರ್ಡಿನ ಕಂಪ್ಲೆಂಟು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನಿಪಿ-4 ಐಎಂವಿ ವರದಿಯಲ್ಲಿ ಬ್ರೇಕ್ ಸಿಸ್ಟಂ ಡ್ಯಾಮೇಜ್ ಆಗಿಲ್ಲದ ಬಗ್ಗೆ ನಮೂದು ಮಾಡಿದ್ದಾರೆ ಎಂದರೆ ಸರಿ. ನಿಪಿ-6 ರ ಎರಡನೇ ಇನ್ ವಾಯ್ಸ್ ನಲ್ಲಿ ಬ್ರೇಕ್ ಸಿಸ್ಟಂ ಕೆಟ್ಟುಹೋಗಿರುವ ಬಗ್ಗೆ ಇನ್ ವಾಯ್ಸ್ ಕೊಟ್ಟಿದ್ದೇನೆ ಎಂದರೆ ಸರಿ. ನಿಪಿ-4 ರಲ್ಲಿ ಕ್ಯಾಬಿನ್ ಅಸೆಂಬ್ಲಿ ಜಖಂ ಗೊಂಡ ಬಗ್ಗೆ ನಮೂದು

ಇಲ್ಲ ಎಂದರೆ ಸರಿ. ನಿಪಿ–6 ರ 3ನೇ ಇನ್ ವಾಯ್ಸ್‌ನಲ್ಲಿ ಕ್ಯಾಬಿನ್ ಅಸೆಂಬ್ಲಿ ಜಖಂ ಗೊಂಡ ಬಗ್ಗೆ ಇನ್ ವಾಯ್ಸ್ ಕೊಟ್ಟಿದ್ದೇನೆ ಎಂದರೆ ಸರಿ. ವಾಹನ ರಿಪೇರಿಗೆ ಬಂದ ತಕ್ಷಣ ಜಾಬ್ ಕಾರ್ಡು ಕೊಡುವ ಮೊದಲು ಏನೆಲ್ಲಾ ಜಖಂ ಗೊಂಡ ಬಗ್ಗೆ ಫೋಟೋ ತೆಗೆದಿಟ್ಟುಕೊಂಡಿರುತ್ತೇವೆ ಎಂದರೆ ಸರಿ. ಸದರಿ ಫೋಟೋಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ವಿಮಾ ಕಂಪನಿಯವರು ಮಾಡಿ ಎಸ್ಟಿಮೇಷನ್ ನಲ್ಲಿ ಸಣ್ಣ ಪುಟ್ಟ ಡ್ಯಾಮೇಜುಗಳು ಮಾತ್ರ ಕಂಡು ಬಂದು ಅವರು ಎಸ್ಟಿಮೇಷನ್ ಅನ್ನು ಸರಿಯಾಗಿ ಕೊಟ್ಟಿದ್ದರೂ ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ನಿಪಿ–6 ರಂತೆ ಇನ್ ವಾಯ್ಸ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಇನ್ ವಾಯ್ಸ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಪೇಮೆಂಟ್ ಮಾಡಿದ್ದರೆ ಕ್ಯಾಷ್ ರಿಸಿಪ್ಟ್ ಕೊಡುತ್ತಿದ್ದೆ ಆ ರೀತಿ ಪೇಮೆಂಟ್ ಮಾಡದ ಕಾರಣ ಕ್ಯಾಷ್ ರಿಸಿಪ್ಟ್ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಕ್ಯಾಷ್ ರಿಸಿಪ್ಟ್ ಹಾಜರು ಪಡಿಸಬಹುದು ಎಂದು ಉತ್ತರಿಸುತ್ತಾರೆ. ನಮ್ಮ ಸಂಸ್ಥೆಗೆ ಅರ್ಜಿಗೆ ಸಂಬಂಧಪಟ್ಟಂತಹ ಗೂಡ್ಸ್ ವಾಹನ ಯಾವ ದಿನಾಂಕದಂದು ರಿಪೇರಿಗೆ ಬಂತೆಂದು ಹೇಳಲಾಗುವುದಿಲ್ಲ. ಅದೇ ರೀತಿ ಸದರಿ ವಾಹನ ಯಾವಾಗ ರಿಪೇರಿ ಆಗಿ ಹೋಯಿತೆಂದು ದಿನಾಂಕ ಹೇಳಲು ನೆನಪಿಲ್ಲ. ನಾನು ನಿಪಿ–6 ರಂತೆ ಇನ್ ವಾಯ್ಸ್ ನೀಡಿದಷ್ಟು ಗೂಡ್ಸ್ ವಾಹನಕ್ಕೆ ಜಖಂ ಆಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.